ಪರಿಶೀಲನೆಯಲ್ಲಿದೆ ಎಂದು ಹೇಳುತ್ತೇನೆ. ಸರ್ಕಾರ ಪರಿಶೀಲನೆ ಕೈಗೊಂಡಾದಮೇಲೆ ಕಾನೂನು ಅಡಿಯಲ್ಲಿ ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮವನ್ನು ಕಾನೂನಿನ ಅಡಿಯಲ್ಲಿ ಕೈಗೊಳ್ಳುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಯಾವಾಗ ಮಾಡುತ್ತೀರಿ? ನಿಮಗೆ ಮಂಡನೆ ಮಾಡುವುದಕ್ಕೆ ತೊಂದರೆ ಏನಿದೆ?

ಶ್ರೀ ಎಂ.ಸಿ. ನಾಣಯ್ಯ : ಇಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಯಾವಾಗ ಇಡುತ್ತೀರಿ?

ಶ್ರೀ ಎಂ.ಸಿ. ನಾಣಯ್ಯ : ಸೂಕ್ತಕಾಲದಲ್ಲಿ ಇಡುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ವಿಶ್ವೇಶ್ವರ ಹೆಗಡೆಯವರು ಬಹಳ ಸೂಕ್ತವಾದುದನ್ನು ಹೇಳಿದ್ದಾರೆ. ಯಾವುದೇ ಆಯೋಗ ತನ್ನ ವರದಿಯನ್ನು ಮಂಡಿಸಿಯಾದ ಆರು ತಿಂಗಳಳೊಗೆ ಅದನ್ನು ಸದನದಲ್ಲಿ ಇಡಬೇಕು ಎಂದು ಹೇಳಿದ್ದಾರೆ. ತಾವು ಕಾನೂನು ಸಚಿವರು. ಆ ಪ್ರಶ್ನೆಗೆ ಉತ್ತರ ಕೊಡಿ. ಒಂದೂವರೆ ವರ್ಷವಾದರೂ ಏಕೆ ಇಡಲಿಲ್ಲ? ಅದಕ್ಕೆ ಕಾರಣ ಏನು?

ಶ್ರೀ ಎಂ.ಸಿ. ನಾಣಯ್ಯ : ಆಡಳಿತಾತ್ಮಕವಾಗಿ ಕೆಲವು ವಿಚಾರಗಳನ್ನು ತೆಗೆದುಕೊಳ್ಳಬೇಕಾಗಿರತಕ್ಕಂಥ ಹಿನ್ನಲೆಯಲ್ಲಿ ಮತ್ತು ವರದಿಯಲ್ಲಿ ಹೇಳಿರತಕ್ಕಂಥ ಕೆಲವು ವಿಚಾರಗಳು ಟರ್ಮ್ಸ ಆಫ್ ರೆಫರೆನ್ಸ್ ಯಾವುದು ಉಂಟು, ಅದಕ್ಕೆ ಹೊರತಾಗಿರತಕ್ಕಂಥ ಹಿನ್ನಲೆಯಲ್ಲಿ ಏನು ಹೇಳಿದ್ದಾರೆ, ಕಾನೂನು ದೃಷ್ಟಿಯಿಂದ ನಾವು ಅದನ್ನು ವಿಚಾರ ಮಾಡಬೇಕಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕಾನೂನು ದೃಷ್ಟಿಯಲ್ಲಿ ಆರು ತಿಂಗಳ ಒಳಗೆ ಸದನದಲ್ಲಿ ವರದಿಯನ್ನು ಮಂಡಿಸಬೇಕಾಗುತ್ತದೆ. ಇಲ್ಲದಿದ್ದರೆ ಕಾನೂನಿನ ಉಲ್ಲಂಘನೆಯಾಗುತ್ತದೆ.

ಶ್ರೀ ಶಿವಾನಂದ ನಾಯ್ಕ : ಒಂದು ನಿಮಿಷ ಅವಕಾಶ ಕೊಡಬೇಕು.

ಅಧ್ಯಕ್ಷರು : ಶಿವಾನಂದ ನಾಯ್ಕ ಅವರೇ, ದಯವಿಟ್ಟು ಕುಳಿತುಕೊಳ್ಳಿ ಶ್ರೀ ರೇವುನಾಯಕ ಬೆಳಮಗಿ.....

ಕಮಲಾಪುರ ಕ್ಷೇತ್ರದಲ್ಲಿ ಜಿಲ್ಲಾಪಂಚಾಯತ್‌ರೋಡ್‌ಗಳಿಗೆ ಡಾಂಬರೀಕರಣ

ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಅಧ್ಯಕ್ಷರೇ, ನಮ್ಮ ಕಮಲಾಪುರ ಮತಕ್ಷೇತ್ರದಲ್ಲಿ ಜಿಲ್ಲಾಪಂಚಾಯತ್ ರೋಡ್‌ಗಳು ಡಾಂಬರೀಕರಣವಾಗಿವೆ.ಆದರೆ ಅವು ಗುಂಡಿಬಿದ್ದು ಹಾಳಾಗುತ್ತಿವೆ. ಜಿಲ್ಲಾ ಪಂಚಾಯತ್‌ಗೆ ಮನವಿ ಮಾಡಿಕೊಂಡರೂ ಕೂಡ ಅವರು ಕ್ರಮ ತೆಗೆದುಕೊಂಡಿಲ್ಲ. ದಸ್ತಾಪುರ ರೋಡ್, ಹೊದಲೂರ ರೋಡ್, ಹುಳಕುಂದ ಮತ್ತೊಂದು ಕಾಳಮಂದರಗಿ - ಇವೆಲ್ಲಾ ರಸ್ತೆಗಳಿಗೆ ಡಾಂಬರೀಕರಣವಾಗಿದೆ. ಆದರೆ ಅವುಗಳಲ್ಲಿ ಗುಂಡಿಗಳು

ಬಿದ್ದಿವೆ. ಹೋದವರ್ಷ ಮಾಡಿದ್ದರೆ ಬಹಳ ಸುಲಭವಾಗಿ ಆಗುತ್ತಿತ್ತು. ಈ ವರ್ಷ ಬಹಳ ಹದಗೆಟ್ಟಿವೆ. ಈ ವರ್ಷವಾದರೂ ಮಾಡದೇ ಇದ್ದರೆ ಆ ರಸ್ತೆಗಳು ಉಪಯೋಗಕ್ಕೆ ಬರುವುದಿಲ್ಲ. ದಯವಿಟ್ಟು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಆದಷ್ಟು ಬೇಗ ಆ ರಸ್ತೆಗಳನ್ನು ದುರಸ್ತಿಮಾಡಿಕೊಡಬೇಕೆಂದು ನಾನು ಕಳಕಳಿಯಿಂದ ವಿನಂಕತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ರೇವುನಾಯಕ್ ಬೆಳಮಗಿ ಅವರ ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರತಕ್ಕಂಥ ಕೆಲವು ರಸ್ತೆಗಳು ಬಹಳ ಹಾಳಾಗಿವೆ. ಅದಕ್ಕೆ ಏನಾದರೂ ಸಹಾಯ ಮಾಡಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :ಸನ್ಮಾನ್ಯ ಅಧ್ಯಕ್ಷರೇ, ಶೂನ್ಯವೇಳೆಯಲ್ಲಿ ಅವರು ಎತ್ತಿದಾಗ ಈ ಗ್ರಾಮೀಣ ರಸ್ತೆಗಳ ವಿಚಾರವನ್ನು ಅವರು ಬರೆದಿರಲಿಲ್ಲ. ಮತ್ತೆ ಅನುದಾನದಲ್ಲಿ ಕೊಡತಕ್ಕಂಥ, ಸಂದರ್ಭದಲ್ಲಿ ಈ ವರ್ಷದ ಕ್ರಿಯಾಯೋಜನೆಯಲ್ಲಿ ಆ ರಸ್ತೆಗಳನ್ನು ಸೇರಿಸಿಕೊಳ್ಳಬೇಕಾಗುತ್ತದೆ. ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗೆ ಅವರೂ ಸದಸ್ಯರಾಗಿರುವುದರಿಂದ ಜಿಲ್ಲಾ ವ್ಯಾಪ್ತಿಯಲ್ಲಿ ಬರತಕ್ಕಂಥ ಹಣದಲ್ಲಿ ಅದನ್ನು ತಾವೇ ಕ್ರಿಯಾಯೋಜನೆಯಲ್ಲಿ ಸೇರಿಸಬೇಕಾದ ಜವಾಬ್ದಾರಿ ತಮ್ಮ ಮೇಲಿದೆ. ಇಲ್ಲಿ ರಾಜ್ಯ ಸರ್ಕಾರ ಯಾವುದೇ ನಿರ್ದೇಶನವನ್ನು ಜಿಲ್ಲಾ ಪಂಚಾಯತಿಗೆ ಕೊಡುವುದಕ್ಕೆ ಬರುವುದಿಲ್ಲ. ಆದರೂ ಕೂಡ ತಾವು ಬರೆದು ಕಳುಹಿಸಿದಂಥಾದ್ದಕ್ಕೆ ಸೂಕ್ತ ನಿರ್ದೇಶನ ಕೊಟ್ಟು ಅದನ್ನು ಕ್ರಿಯಾಯೋಜನೆಯಲ್ಲಿ ಸೇರಿಸಿಕೊಳ್ಳಿ ಎಂದು ನಾನು ಶಿಫಾರಸ್ಸು ಮಾಡುತ್ತೇನೆ.

ಶ್ರೀ ರೇವುನಾಯಕ ಬೆಳಮಗಿ : ತಾವು ಜಿಲ್ಲಾ ಪಂಚಾಯ್ತಿಯವರಿಗೆ ಸೂಕ್ತ ನಿರ್ದೇಶನ ಕೊಡಬೇಕು. ಅವರು, ನಾವು ಹೇಳಿದರೆ ಕೇಳುತ್ತಾ ಇಲ್ಲಾ. ದಯವಿಟ್ಟು ಈ ಕೆಲಸವನ್ನು ತಾವು ಮಾಡಿಕೊಡಬೇಕಾಗಿ ಮತ್ತೊಮ್ಮೆ ಕೇಳಿಕೊಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಅವರ ಕಷ್ಟವನ್ನು ಕೇಳಿದ್ದಾರೆ. ಯಾವುದೇ ತರದ ಕಡಿತ ಮಾಡದಂತೆ ಅವರ ಕ್ಷೇತ್ರದಲ್ಲಿ ಆದ್ಯತೆ ಕೊಡಬೇಕು ಮತ್ತು ಕ್ರಿಯಾಯೋಜನೆಯಲ್ಲಿ ಸೇರಿಸಬೇಕೆಂದು ತಿಳಿಸುತ್ತೇನೆ.

ಗದಗ್ ಹುಡ್ಕೋ ಬಡಾವಣೆಯಲ್ಲಿ ಶ್ರೀಮತಿ ಸುಮಂಗಲ ಹಿರೇಮಠ ಎಂಬುವರ ಮನೆಯಿಂದ ಹೊರಗೆ ಹೋದಾಗ ಕಳವು ಮಾಡಿರುವುದು ಮತ್ತು ಒಬ್ಬ ಯುವಕನಿಗೆ ಚೂರಿಯಿಂದ ಇರಿತಕ್ಕೆ ಒಳಗಾದ ವ್ಯಕ್ತಿಗೆ ಪರಿಹಾರ.

ಶ್ರೀ ಡಿ.ಆರ್. ಪಾಟೀಲ್ (ಗದಗ್) : ಅಧ್ಯಕ್ಷರೇ, ಹೋದ ತಿಂಗಳು 30 ರಂದು ಗದಗ್ ಹುಡ್ಕೋ ಬಡಾವಣೆಯಲ್ಲಿ ಶ್ರೀಮತಿ ಸುಮಂಗಲ ಹಿರೇಮಠ ಎಂಬುವವರು ಮಧ್ಯಾಹ್ನದ ವೇಳೆಯಲ್ಲಿ ಮನೆಯಿಂದ ಹೊರಗೆ ಹೋದಾಗ ಕಳವು ಮಾಡಿ, ಕಳ್ಳರು ಓಡಿ ಹೋಗುವ ಮುಂಚೆ ಅಲ್ಲಿ ಒಬ್ಬ ಯುವಕ ನೋಡಿ, ಅವರನ್ನು ಹಿಡಿದ. ಅದರಲ್ಲಿ ಒಬ್ಬ ಕಳ್ಳ, ಅವನಿಗೆ ಚೂರಿ ಹಾಕಿದ. ಆ ಚೂರಿ ಇರಿತಕ್ಕೆ